HON'BLE MEMBERS.—Yes.

Mr. SPEAKER.—Permission to remain absent is granted.

———

PAPERS LAID ON THE TABLE.

Sri S. NIJALINGAPPA (Chief Minister).—Sir, on behalf of the Minister for Transport, I lay on the Table Notification No. HD.51 TMT 65 dated 16th February 1966, as required under sub-section (2) of section 16, of the Mysore Motor Vehicles Taxation Act, 1957.

Mr. SPEAKER.—Now we resume the debate.....

———

Member's Representation.

Sri SIDDIAH KASHIMATH (Shirahatti).—Before that, I would like to draw the attention of the Chief Minister to a subject.

ಸ್ವಾಮಿ, ಧಾರವಾಡ ಜಿಲ್ಲೆಯಿಂದ ದನಕರುಗಳಿಗಾಗಿ ಹುಲ್ಲನ್ನು ಸಾಬರಾಜು ಮಾಡುವು ದಕ್ಕಾಗಿ ರೈಲು ಮೂಲಕ ಕಳುಹಿಸಬೇಕೆಂದು ಏರ್ಪಾಡು ಮಾಡರಾಗಿತ್ತು. ಇದಕ್ಕಾಗಿ ವ್ಯಾಗನ್ನು ಗಳನ್ನು ರೈಲಿನವರು ಕೊಡಲು ಸಹಾಯ ಮಾಡಬೇಕೆಂದು ಕೇಳಿದ್ದಕ್ಕೆ ಅವರೂ ಕೆಲವು ವ್ಯಾಗನ್ನು ಗಳನ್ನು ಕೊಟ್ಟಿದ್ದರು. ಶಿರಹಟ್ಟಿಯಿಂದ ಚಿತ್ರದುರ್ಗಕ್ಕೆ ಸುಮಾರು ನಾಲ್ಕು ವ್ಯಾಗನ್ನುಗಳಷ್ಟು ಮಾತ್ರ ಕಳುಹಿಸಲು ಅನುಕೂಲವಾಯಿತು. ಇನ್ನೂ 8—10 ವ್ಯಾಗಳಷ್ಟು ಸಾಗಿಸಬೇಕೆಂದು ರೈಲೆ ನವರನ್ನು ಕೇಳಿದಾಗ ಡೀಸರ್ ಎಣ್ಣೆ ಕೊರತೆ ಇದೆ ಇದರಿಂದ ಅನಾನುಕೂಲವಾಗಿದೆ ಎಂದು ತಿಳಿಯಬಂತು. ಇದರಿಂದಾಗಿ ದನಕರುಗಳಿಗೆ ಬೇಕಾಗುವ ಮೇವನ್ನು ಕಳುಹಿಸಲು ತೊಂದರೆಯಾ ಗುತ್ತಿದೆ. ಈ ಪರಿಸ್ಥಿತಿಯನ್ನು ಹಿಂದೆ ಕೂಡ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರು ಧಾರವಾಡದ ಕಡೆ ಬಂದಾಗ ತಿಳಿಸಿದ್ದೆ. ಇದರ ಬಗ್ಗೆ ಸರಕಾರ ತೀವ್ರ ಕ್ರಮತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

9-00 A.M.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು)—ಈಗ ಹುಲ್ಲು ಎಲ್ಲೆಲ್ಲಿ ಇದೆಯೋ ಆ ಭಾಗದಿಂದ ಹುಲ್ಲನ್ನು ತರಿಸುವುದಕ್ಕೆ ರೈತರಿಗೆ ಉಚಿತವಾಗಿ ರಾರಿಗಳನ್ನು ಒದಗಿಸುತ್ತೇವೆಂದು ಸರ್ಕಾರದವರು ಹೇಳಿ ದ್ದರು. ಆದರೆ ತುಮಕೂರು ಡಿಸ್ಟ್ರಿಕ್ಟಿನಲ್ಲಿ ರೈತರಿಗೆ ಇದುವರೆಗೂ ರಾರಿಯನ್ನು ಸರ್ಕಾರದವರು ಒದಗಿಸಿಲ್ಲ. ಈಗ ತುಮಕೂರಿನಲ್ಲಿ ಒಂದು ಪಬ್ಲಿಕ್ ವರ್ಕ್ಸ್ ಇಲಾಖೆಯ ರಾರಿಯು ಮಾತ್ರ ಕೆಲಸ ಮಾಡುತ್ತಿದೆ. ಇದರಿಂದ ಅಲ್ಲಿ ಬಹಳ ತೊಂದರೆಯಾಗಿದೆ. ಧಾರವಾಡ ಜಿಲ್ಲೆಯಲ್ಲಿ ಶಿರಹಟ್ಟಿ ಮುಂತಾದ ಪ್ರದೇಶಗಳಲ್ಲಿ ಕೂಡಿ ಹಾಕಿರತಕ್ಕ ಹುಲ್ಲನ್ನು ರೈಲ್ವೆ ವ್ಯಾಗಿನ್‌ನಲ್ಲಿ ನೇರವಾಗಿ ತಿಪಟೂರು ಮತ್ತು ತುಮಕೂರು ಮುಂತಾದ ಪ್ರದೇಶಗಳಿಗೆ ತರುವುದಕ್ಕೆ ಅವಕಾಶವಿದೆ. ಆದ್ದರಿಂದ ರೈಲ್ವೆ ವ್ಯಾಗನ್ ಮೂಲಕ ಹುಲ್ಲನ್ನು ತರಿಸಿ ರೈತರಿಗೆ ಒದಗಿಸುವುದಕ್ಕೆ ಸರ್ಕಾರದವರು ಆದೇಶವನ್ನು ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರ ಸರ್ಕಾರಕ್ಕೆ ಗೊತ್ತಿದೆ. ಧಾರವಾಡ ಜಿಲ್ಲೆಯಲ್ಲಿ ಜನಗಳು ಸುಮಾರು ನೂರು ಟ್ರಕ್‌ಗಳಷ್ಟು ಶಪ್ಪೆ ಹುಲ್ಲನ್ನು ಕೂಡಿ ಹಾಕಿದ್ದಾರೆ. ಅದನ್ನು ರಾರಿಗಳಲ್ಲಿ ತರುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೋಸ್ಕರ ಅದನ್ನು ರೈಲ್ವೆ ಮುಖಾಂತಂ ತರಿಸುವುದಕ್ಕೆ ರೈಲ್ವೆ ಮಂತ್ರಿಗಳಿಗೆ ಬರೆದಿದ್ದೇವೆ. ಅವರು ರೈಲ್ವೆ ವ್ಯಾಗನ್‌ಗಳು ಎಷ್ಟು ಬೇಕಾದರೂ ಕೊಡುತ್ತೇವೆಂದು ನಮಗೆ ಆಶ್ವಾಸನೆ ಕೊಟ್ಟಿದ್ದಾರೆ. ಅದನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಆಮೇರೆ ಶ್ರೀಮಾನ್ ಸಿದ್ದಯ್ಯ ಕಾಶೀಮಠ್ ಅವರು ಡೀಸೆರ್ ಎಣ್ಣೆಯ ತೊಂದರೆ ಇದೆಯೆಂದು ಹೇಳಿದರು. ಇನ್ನು ಎರಡು ಮೂರು ದಿನಗಳಲ್ಲಿ ಅದನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Mr. SPEAKER.—These are all matters about which members can meet the Minister in his chamber. Why should the floor of the House be used for small matters like this ?

Sri C. J. MUCKANNAPPA (Sira).—The matter is important.

Mr. SPEAKER.—I do not say that the matter is not important. That is why I did not object to the matter being raised in the first instance. But this is not a matter which disturb the even flow of the work of the House. The importance of the matter has been sufficiently emphasised and the matter will be attended to. Let this not be converted into a debate.

BUDGET ESTIMATES FOR 1966-67—DEMANDS FOR GRANTS

Demand Nos. 14, 16, 24 and 44

(Debate contd.)

Mr. SPEAKER.—Now, I suppose we shall close this demand by noon today.

Sri S. SIVAPPA (Sravanabelagola).—We can continue discussion on this dsmand till 3 p.m.; four hours may be allowed for discussion.

Mr. SPEAKER.—The debate will continue till 12-30 p.m. and the reply will be at 2 p.m. when the House re-assemble again. Sri Keshava Murthy will take five minutes.

Sri H. R. KESHAVA MURTHY (Gandasi).—Five minutes are not sufficient and I require ten minutes.

Mr SPEAKER.—He has already spoken for some time the previous day and so I will allow him only five minutes.

Sri H. R. KESHAVA MURTHY.—Then, I do not speak.

Mr SPEAKER.—Then, I call upon Sri K. P. Gadag to speak.

ಶ್ರೀ ಕೆ. ಪಿ. ಗದಗ್ (ಗದಗ್).—ಅಧ್ಯಕ್ಷರೇ, ಮಾನ್ಯ ಔದ್ಯೋಗಿಕ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಸಂಖ್ಯೆ 14, 16, 24, 44 ಇವುಗಳ ಬಗ್ಗೆ ನಾನು ನನ್ನ ಅನುಮತಿಯನ್ನು ಕೊಡುತ್ತೇನೆ. ಈ ಬೇಡಿಕೆಗಳಲ್ಲಿ 24 ಮತ್ತು 44 ನೇ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಿ ಅವುಗಳ ಬಗ್ಗೆ ನನ್ನ ಉಚಿತವಾದ ಸಲಹೆ ಮತ್ತು ಸೂಚನೆಗಳನ್ನು ಹೇಳಬಯಸುತ್ತೇನೆ. ಪ್ರಾಂತದ ಉದ್ಯಮದ ಬೆಳವಣಿಗೆಗೆ ಸರ್ಕಾರ ಸರಿಯಾಗಿ ಗಮನ ಕೊಡುತ್ತಿಲ್ಲ, ಅದರ ಬಗ್ಗೆ ಜಾಗರೂಕತೆಯಿಂದ ಇಲ್ಲ, ಉದಾಸೀನ ಧೋರಣೆಯನ್ನು ತಳೆದಿದೆ ಎನ್ನುವ ವಿಚಾರ ಈಗಾಗಲೇ ವಿರೋಧಪಕ್ಷದ ಮಾನ್ಯ ಸದಸ್ಯರಿಂದ ವ್ಯಕ್ತವಾಗಿದೆ. ಈ ಅಭಿಪ್ರಾಯ ಸಾಮಾನ್ಯವಾಗಿ ಈ ವಿಷಯದ ಬಗ್ಗೆ ವ್ಯಕ್ತವಾಗುವ ಸಂದರ್ಭ ಕಂಡುಬರುತ್ತಿದೆ. ಆದರೆ ಈ ವಿಚಾರಕ್ಕೆ ಅವರು ಕೊಟ್ಟ ಕಾರಣಗಳೇನೆಂದರೆ, ನೆರೆಯ ಪ್ರಾಂತಗಳಾದ ಮದ್ರಾಸು ಮತ್ತು ಆಂಧ್ರ, ಮಹಾರಾಷ್ಟ್ರ ದೇಶಗಳಲ್ಲಿರತಕ್ಕ ಉದ್ಯಮಗಳ ಬೆಳವಣಿಗೆಗೂ ನಮ್ಮ ಪ್ರಾಂತದ ಉದ್ಯಮಗಳ ಬೆಳವಣಿಗೆಗೂ ಹೋಲಿಸಿ ನೋಡಿದರೆ ನಮ್ಮ ಪ್ರಾಂತದಲ್ಲಿರತಕ್ಕ ಉದ್ಯಮಗಳ ಬೆಳವಣಿಗೆ ಅಷ್ಟೊಂದು ಪ್ರಗತಿದಾಯಕವಾಗಿ ಆಗಿಲ್ಲ ಎನ್ನುವ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಅವರು ವ್ಯಕ್ತ ಮಾಡಿದ್ದು ಆಗಿದೆ. ಆದರೆ ಈ ಅಭಿಪ್ರಾಯಕ್ಕೆ ಅವರು ಇದ್ದ ಪರಿಸ್ಥಿತಿಯನ್ನು ಕೆಲವು ಮಟ್ಟಿಗೆ ಗಮನಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಮದ್ರಾಸು ಮತ್ತು ಮಹಾರಾಷ್ಟ್ರ ಪ್ರಾಂತಗಳಲ್ಲಿ ಯಾವ ಸೌಲಭ್ಯ ಮತ್ತು ಅನುಕೂಲತೆಗಳು ಇವೆಯೋ ಆ ಸೌಲಭ್ಯ ಮತ್ತು ಅನುಕೂಲತೆಗಳು ಈ ಪ್ರಾಂತದಲ್ಲಿ ಇಲ್ಲದೆ ಇರುವುದರಿಂದ ಈ ಉದ್ಯಮಗಳ ಬೆಳವಣಿಗೆ, ಪ್ರಗತಿ ಇಲ್ಲಿ ಕುಂಠಿತವಾಗಿದೆ ಎಂಬ ಅಭಿಪ್ರಾಯವಿದೆ. ಈಗಿನ ಸಂದರ್ಭದಲ್ಲಿ ಉದ್ಯಮಗಳ ಬೆಳವಣಿಗೆಗೆ ಸಾಮಾನ್ಯವಾಗಿ ಎಕ್ಸ್‌ಪೋರ್ಟ್